ಕಥೆ

# ಹೊಟ್ಟೆಬಾಕರು



## ■ ಡಾ.ಮನೋಜ ಗೋಡಬೋಲೆ

ಅಹಮಿಕೆ ಎನ್ನುವುದು ಸುಬ್ಬಣ್ಣನ ಹೆಗ್ಗುರುತಾಗಿತ್ತು. ಪ್ರತಿಯೊಂದರಲ್ಲೂ ತಾನೇ ಮೇಲು, ತಾನೇ ಬುದ್ಧಿವಂತ, ತನ್ನನ್ನು ಮೀರಿಸುವವರು ಈ ಜಗದಲ್ಲಿ ಯಾರೂ ಇಲ್ಲ ಎಂಬಂತಾಗಿತ್ತು ಅವನ ಎಣಿಕೆ. ಯಾಕಾಗಬಾರದು? ಆತ ಪಿಯುಸಿಯನ್ನು ಕಷ್ಟಪಟ್ಟು ಪಾಸಾಗಿದ್ದರೂ ಮುಂದಿನ ತರಗತಿಗಳಲ್ಲೆಲ್ಲಾ ಅದು ಹ್ಯಾಗೋ ಕ್ಲಾಸಿಗೇ ಟಾಪರ್ ಆಗಿದ್ದ! ಡಿಗ್ರಿಯನ್ನೋದುವಾಗ ಸಿಲಬಸ್ಸು ಸುಲಭವಿತ್ತೋ? ಅಥವಾ ಅವನೋದಿದ್ದ ಪ್ರಶ್ನೆಗಳೇ ಪರೀಕ್ಷೆಗಳಲ್ಲಿ ಬೀಳುತ್ತಿದ್ದವೋ? ಗೊತ್ತಿಲ್ಲ. ಒಟ್ಟಿನಲ್ಲಿ ಬಿಎಸ್ಸಿಯನ್ನು ಕಾಲೇಜಿಗೇ ಪ್ರಥಮನಾಗಿ ಮುಗಿಸಿದ್ದ. ಕಾಲೇಜಿನಲ್ಲಿದ್ದಾಗಲೇ ಪಠ್ಯೇತರ ಚಟುವಟಿಕೆಗಳಲ್ಲೂ ಆತನ ಛಾಪು ಮೂಡಿತ್ತು. ಒಳ್ಳೆಯ ಮಾತುಗಾರನಾಗಿದ್ದರಿಂದ ಭಾಷಣ ಮತ್ತು ಚರ್ಚಾ ಸ್ಪರ್ಧೆಗಳಲ್ಲೆಲ್ಲಾ ಆತನೇ ಮೊದಲಿಗನಾಗಿರುತ್ತಿದ್ದ. ಯುನಿವರ್ಸಿಟಿ ಮಟ್ಟದಲ್ಲೂ ಸ್ಪರ್ಧಿಸಿ ಬಹುಮಾನಗಳನ್ನು ಗೆಲ್ಲುತ್ತಿದ್ದ! ಹೀಗಾಗಿ ಆತ ಕಾಲೇಜಿನ ಎಲ್ಲಾ ಪ್ರಾಧ್ಯಾಪಕರ ಅಚ್ಚುಮೆಚ್ಚಾಗಿದ್ದ. ಅಂತೆಯೇ ಆತನ ತಲೆಯ ಮೇಲೆ ಯಾವತ್ತೂ ಎರಡು ಕೊಂಬುಗಳು ಮೂಡಿರುತ್ತಿದ್ದವು. ಬಿಎಸ್ಸಿಯ ನಂತರ ಸುಬ್ಬಣ್ಣ ವಿಶ್ವವಿದ್ಯಾಲಯದ ಕೆಮಿಸ್ಟ್ರಿ ವಿಭಾಗದಲ್ಲಿ ಸೇರಿ ಅಲ್ಲಿಯೂ ತನ್ನ ಪ್ರಥಮ ಸ್ಥಾನವನ್ನೂ ಬಿಟ್ಟುಕೊಟ್ಟಿರಲಿಲ್ಲ. ಹೀಗಾಗಿ ಎರಡನೇ ವರ್ಷದ ಕೊನೆಯಲ್ಲಿನ ಕ್ಯಾಂಪಸ್ ಇಂಟರ್‌ವ್ಯೂನಲ್ಲಿ ಪಾಸಾಗಿ ಹೆಸರಾಂತ ಕಂಪೆನಿಯಲ್ಲಿ ಮರಿ ವಿಜ್ಞಾನಿಯಾಗಿ ಸೇರ್ಪಡೆಗೊಂಡಿದ್ದ. ತಗೊಳ್ಳಿ, ಎರಡು ಕೋಡುಗಳು ಇನ್ನಷ್ಟು ಉದ್ದವಾಗಿದ್ದವು! ಸಣ್ಣ ವಯಸ್ಸಿನಲ್ಲಿಯೇ ಹಲವಾರು ಪ್ರಥಮಗಳನ್ನು ಸಾಧಿಸಿದ್ದರಿಂದ ಕಪಿಗಳು (ಕನ್ಯಾಪಿತೃಗಳು) ನಾ ಮುಂದು ತಾ ಮುಂದು ಎಂದು ತಮ್ಮ ಕೂಸುಗಳನ್ನು ಧಾರೆ ಎರೆದು ಕೊಡಲು ಮುಂದೆ ಬಂದಿದ್ದವು. ವಯೋ ಸಹಜ ನಾಚಿಕೆಯಿಂದ 'ಈಗಾಗಲ್ಲಪ್ಪ, ಮುಂದಾಗಲ್ಲಪ್ಪ..' ಎಂದು ಎರಡು ವರ್ಷಗಳ ಬ್ಯಾಚುಲರ್ ಲೈಫನ್ನು ಸುಬ್ಬಣ್ಣನು ಮಜವಾಗಿ ಬೆಂಗಳೂರಿನಲ್ಲಿ ಕಳೆದೇ ಬಿಟ್ಟನು!

ಇಪ್ಪತ್ತೆಂಟರ ಗಡಿಯನ್ನು ದಾಟಿದ ಕ್ಷಣದಿಂದ ಯಾವಾಗ ಮನೆಯವರ ವರಾತ ಜಾಸ್ತಿಯಾಯಿತೋ 'ಹ್ಞೂಂ, ಹುಡುಕಿ ಬಿಡಿ ನನಗೆ ಅನುರೂಪವಾದ ಕನ್ಯೆಯನ್ನು' ಎಂದು ಅಪ್ಪ ಅಮ್ಮಂದಿರಿಗೆ ಗ್ರೀನ್ ಸಿಗ್ನಲ್ಲನ್ನು ಕೊಟ್ಟೇ ಬಿಟ್ಟನು. ಶುರುವಾಯಿತು ನೋಡಿ ಕನ್ಯಾ ಬೇಟೆ! ಈ ಸುದ್ದಿ ಎಲ್ಲಾ ಆಕಾಂಕ್ಷೀ ಕಪಿಗಳ ಕಿವಿಗೆ ಬಿದ್ದಿದ್ದೇ ತಡ, ಎಲ್ಲರೂ ಸುಬ್ಬಣ್ಣನ ಕೋಡುಗಳನ್ನು ಬೆಳೆಸಲು ಪೈಪೋಟಿಗಿಳಿದರು. ಒಬ್ಬ ಕಪಿಯು ಸುಬ್ಬಣ್ಣನನ್ನು ಯಾವುದೋ ಒಂದು ಮದುವೆಯಲ್ಲಿ ಭೇಟಿಯಾದಾಗ ಅಭಿನಂದಿಸಿ, ಗೋತ್ರ ಪ್ರವರಗಳನ್ನೆಲ್ಲಾ ವಿಚಾರಿಸಿ, ಇಷ್ಟು ಸಣ್ಣ ವಯಸ್ಸಿಗೇ ವಿಜ್ಞಾನಿಯೇನಪ್ಪಾ ನೀನು? ಎಷ್ಟು ಸಾಧಿಸಿಬಿಟ್ಟಿದ್ದೀಯಾ? ನನ್ನ ಮಗನೂ ಇದ್ದಾನೆ, ಬಿಕಾಂ ಮಾಡ್ಕಂಡು ಯಾವ್ದೋ ಎಮ್ಮೆನ್ಸಿಯಲ್ಲಿ ಚಾಕರಿ ಮಾಡ್ತಿದಾನಪ್ಪಾ. ಆತನ ಕೆಲ್ಸಕ್ಕೆ ಹೊತ್ತಿಲ್ಲಾ, ಗೊತ್ತಿಲ್ಲಾ. ಈಗಂತೂ ಎಲ್ರೂ ಇಂತಹ ಎಮ್ಮೆನ್ಸಿಗಳಲ್ಲಿ ಕೆಲ್ಸ ಮಾಡೀ, ಮಾಡೀ, ಅದಕ್ಕಿರೋ ಗತ್ತೂ ಹೋಗ್ಬಿಟ್ಟಿದೆಯಪ್ಪಾ! ಆದ್ರೆ ನೀನಿದಿಯಲ್ಲಾ? ನೀನು ಸಾಧಿಸಿರೋದು ಅದ್ಭುತ!! ಮುಂದೊಂದು ದಿನ ಗ್ಯಾರೆಂಟಿ ನಿಂಗೆ ನೋಬೆಲ್ ಪ್ರೈಜೂ ಬರತ್ತೆ. ನೋಡ್ತಾ ಇರು ಎಂದು ಪೂಸಿ ಹೊಡೆಯತೊಡಗಿದ್ದ.

ಆಗ ಸುಬ್ಬಣ್ಣನ ಕಾಲು ನೆಲದ ಮೇಲಿರಲೇ ಒಲ್ಲದಾಗಿತ್ತು! ಬಹುಶಃ ಈತ ಒಬ್ಬ ಕಪಿಯಿರ ಬಹುದು. ತನ್ನ ಮಗಳನ್ನ ನಂಗೆ ಕೊಡ್ಲಿಕ್ಕೆ ಇಷ್ಟೆಲ್ಲಾ ಪೀಠಿಕೆ ಹಾಕ್ತಿರ್ಬೇಕು ಎಂದುಕೊಂಡು ಕಲ್ಪನಾ ಲೋಕದಲ್ಲಿ ನೋಬೆಲ್ ಪ್ರಶಸ್ತಿಯ ಹತ್ತಿರತ್ತಿರ ತಲುಪಿದ್ದ ಸುಬ್ಬಣ್ಣ ತನ್ನ ಮೊರದಗಲವಾದ ಮುಖಾರವಿಂದದೊಡನೆ ಅಕ್ಕ ಲಕ್ಷ್ಮಿಯ ಬಳಿ ಮೇಲಿನ ಘಟನೆಯನ್ನು ಎದೆಯುಬ್ಬಿಸಿ ಹೇಳಿದ. ಲಕ್ಷ್ಮಿ ನಗುತ್ತಾ 'ಯಾರು ಹಾಗಂದವ್ರು? ಆ ಹೊನ್ನಾಳೀ ನರಸಿಂಹಣ್ಣನಾ? ಅವ್ನಿಗೆ ಒಬ್ಳು ಮಗ್ಳಿದ್ದಾಳೆ. ರಂಜಿ ಅಂತಾ, ಮುಂಬಲ್ಲಿ, ಯಾವಾಗ್ಲೂ ನಾಲ್ಕು ಹಲ್ಲು ಬಾಯಿ ಹೊರಗೇ ಚಾಚ್ಕೊಂಡು ತುರಿಯೋ ಮಣೆ ಹಂಗಿವೆ. ಬಹುಶಃ ಅವಳನ್ನಾ ನಿಂಗೆ ಕೊಡೋ ಆಲೋಚನೇಲಿ ಹಾಗಂದಿರ್ಬೇಕು' ಎಂದಾಗ ಸುಬ್ಬಣ್ಣನಿಗೆ ಜೀರ್ಣಿಸಿಕೊಳ್ಳಲಾಗಲಿಲ್ಲ. ಎಲಾ ಇವ್ರ! ಎಷ್ಟು ಬೇಗ ಯಾಮಾರಿಬಿಟ್ಟೆ? ನಾನು ವಿಜ್ಞಾನಿಯಾದ ಮಾತ್ರಕ್ಕೆ ಅರಸಿಕ ಅಂದ್ಕೊಂಡ್ ಬಿಟ್ಟಿದಾರಾ? ಎಂದುಕೊಂಡು ಗಾಳಿ ಕಳೆದುಕೊಂಡ ಬಲೂನಿನಂತೆ ಠುಸ್ ಎಂದು ಆಗಸದಿಂದ ತನ್ನ ಕಾಲುಗಳನ್ನು ಕೆಳಗಿಳಿಸತೊಡಗಿದ. ಇನ್ನೊಬ್ಬ ಕಪಿಯು ಆಸ್ಪತ್ರೆಯಲ್ಲಿ ಸುಬ್ಬಣ್ಣ ಸಿಕ್ಕಾಗ, ತೀವ್ರವಾಗಿ ತುರಿಸುತ್ತಿದ್ದ ಕುಂಡೆಯ ಮೇಲಿನ ಕುರದ ನೋವಿನಲ್ಲಿಯೇ ನಗುವನ್ನು ತಂದುಕೊಂಡು ಮತ್ತೊಂದು ರೀತಿ ಸುಬ್ಬಣ್ಣನ ತಲೆಗೆ ಕಿರೀಟ ತೊಡಗಿಸತೊಡಗಿದ್ದ. ಆತನ ಹೊಗಳಿಕೆಗಳ ಅಟ್ಟಕ್ಕೆ ಹತ್ತಿದ್ದ ಸುಬ್ಬಣ್ಣ ತಾನು ಬಂದ ಕೆಲಸವನ್ನೂ ಮರೆತು ಹಾಗೇ ಹಿಂತಿರುಗಿದ್ದ!

ಇಂತಿರ್ಪ ಸುಬ್ಬಣ್ಣನಿಗೂ ಒಬ್ಬಾಕೆ ಗಂಟು ಬಿದ್ದಳು. ಕೆರೆಮನೆಯ ರಾಮರಾಯರ ಮಗಳು ಸುಬ್ಬಿ, ಯಾವುದೋ ಖಾಸಗೀ ಕಾಲೇಜಿನಲ್ಲಿ ಇಂಗ್ಲಿಷ್ ಹೇಳಿಕೊಡುತ್ತಿದ್ದಳು. ತನ್ನ ನಯ, ನಾಜೂಕಿನಿಂದ, ಒಳ್ಳೆಯ ನಡತೆಯಿಂದ ಊರಲ್ಲೆಲ್ಲಾ ಹೆಸರುವಾಸಿಯಾಗಿದ್ದ ಆಕೆ ಸುಬ್ಬಣ್ಣನ ಹೆತ್ತವರನ್ನು ಸೆಳೆಯಲು ತಡವಾಗಲಿಲ್ಲ. ಭೇಟಿಯಾದ ಎರಡೇ ತಿಂಗಳಲ್ಲಿ ಭರ್ಜರಿ ಚಪ್ಪರದಲ್ಲಿ ವಾಲಗ ಊದಿಸಿ ಧೂಂಧಾಂ ಎಂದು ಸುಬ್ಬ ಮತ್ತು ಸುಬ್ಬಿಯ ಮದುವೆಯಾಗಿಯೇ ಹೋಯಿತು. ಸುಬ್ಬಿಯನ್ನು ಮದುವೆಯಾಗಿ ಬೆಂಗಳೂರಿನಲ್ಲಿ ನೆಲೆಸತೊಡಗಿದ ಮೇಲೆಯೇ ಸುಬ್ಬಣ್ಣನಿಗೆ ತನ್ನ ಇನ್ನೊಂದು ಹಿರಿಮೆಯ ಪರಿಚಯವಾಗಿದ್ದು! ಮದುವೆಯ ಮೊದಮೊದಲು ಅವನ ಮೂಗಿನ ಹೊಳ್ಳೆಗಳಿಂದ, ತೆರೆದ ಗಂಟಲಿನಿಂದ ಹೊಮ್ಮುತ್ತಿದ್ದ ಸಿಂಹನಾದವನ್ನು, ಅರ್ಥಾತ್ ಗೊರಕೆಯನ್ನು, ಹೇಗೋ ಸಹಿಸಿಕೊಳ್ಳತೊಡಗಿದ ಸುಬ್ಬಿಯ ಕೈರುಚಿ ಅದ್ಭುತವಾಗಿತ್ತು. ಸುಬ್ಬಿಯ ಅಡುಗೆಯಿಂದ ಗುಡಾಣದಂತೆ ದೊಡ್ಡದಾಗುತ್ತಿರುವ ಹೊಟ್ಟೆಯಿಂದಾಗಿ ಸುಬ್ಬ ತನ್ನೊಳಗಿನ ಒಂದು ವಿಶೇಷವನ್ನು ಗಮನಿಸತೊಡಗಿದ. ಆತನ ತಟ್ಟೆಗೆ ಏನು ಬಿದ್ದರೂ, ಎಷ್ಟು ಬಿದ್ದರೂ ಆತ ಜೀರ್ಣಿಸಿಕೊಳ್ಳಬಲ್ಲವನಾಗಿದ್ದ! ಹೀಗಾಗಿ ಅವರ ಮನೆಯಿಂದ ಯಾವುದೇ ಅಳಿದುಳಿದ ಅಡುಗೆಗಳು, ತಿಂಡಿತಿನಿಸುಗಳು ಕಸದ ಬುಟ್ಟಿ ಸೇರುತ್ತಿರಲಿಲ್ಲ. ಅಂತೆಯೇ ಯಾವುದೇ ಹಸು ಅಥವಾ ನಾಯಿಗಳು ಅಪರೂಪಕ್ಕೂ ಅವರ ಮನೆಯ ಬದಿ ಸುಳಿಯುತ್ತಿರಲಿಲ್ಲ!